ಓ.ಎಸ್. ನಂ. : 12–2020

ಪಿ.ಡಬ್ಲ್ಯೂ : 2

ಸಾಕ್ಷಿಯ ಹೆಸರುಃ ಶ್ರೀಮತಿ ನಮಿತಾ ಆನಂದು ಉಳಗೇಕರ

ದಿಃ 04–03–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್ ಎಸ್ ಎಚ್ (ಜಿ) ವಕೀಲರಿಂದಃ ಪ್ರತಿವಾದಿ ಪರವಾಗಿಃ**

ಲಲಿತಾರವರನ್ನು ನಾನು ಜೀವಂತ ಇರುವಾಗ ನೋಡಿದ್ದು ಇರುವುದಿಲ್ಲ, ಅವರ ಕುರಿತು ನನ್ನ ತಾಯಿ ಹೇಳಿರುವುದನ್ನು ಕೇಳಿರುತ್ತೇನೆ. ಸದರಿಯವರು ಆರೋಗ್ಯ ಸರಿಯಾಗಿ ಇರದೇ ಇರುವ ಕಾರಣಕ್ಕಾಗಿ ತೀರಿಕೊಂಡಿರುತ್ತಾರೆ ಅಂತಾ ಕೇಳಿ ತಿಳಿದಿರುತ್ತೇನೆ. ಲಲಿತಾರವರು ತೀರಿಕೊಳ್ಳುವ ಪೂರ್ವದಲ್ಲಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಚೆನ್ನಾಗಿ ಇದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಹೃದಯವನ್ನು ಹಗುರ ಮಾಡಿಕೊಳ್ಳುವ ಸಲುವಾಗಿ ಮತ್ತು ತನಗಿರುವ ಋಣಭಾರವನ್ನು ಕಡಿಮೆ ಮಾಡಿಕೊಳ್ಳಲು ಪ್ರತಿವಾದಿಯು ಹತ್ತಿರದ ಸಂಬಂಧಿಯಾಗಿದ್ದು, ಅವರಿಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದು ಇರುತ್ತದೆ ಈ ವಿಷಯ ತಿಳಿದಿದ್ದರೂ ಸಹ ವಾದಿಯರಿಗೆ ಸಹಾಯ ಮಾಡುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಯರ್ ನಿಗೆ, ಪುಂಡಲೀಕನಿಗೆ ಮತ್ತು ನನ್ನ ಅಜ್ಜಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಕೋಯರನ ಮಗಳು ಅಲ್ಲ, ಪುಂಡಲೀಕನ ಸಹೋದರಿಯು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪುಂಡಲೀಕ ಈತನಿಗೆ ಪ್ರತಿವಾದಿಯು ಹತ್ತಿರದ ಸಂಬಂಧಿಯಾಗಿದ್ದು ಹಾಗೂ ಲಲಿತಾರವರು ಮೃತ್ಯು ಪತ್ರ ಮಾಡಿಕೊಟ್ಟಿರುವ ಆಧಾರದ ಮೇರೆಗೆ ಪ್ರತಿವಾದಿಗೆ ಮಾತ್ರ ಹಕ್ಕು ಅಧಿಕಾರ ದಾವಾ ಆಸ್ತಿಯ ಮೇಲೆ ಇರುತ್ತದೆ ಎಂದರೆ ಸರಿಯಲ್ಲ. ಮದುವೆಯಾದ ಹೆಣ್ಣು ಮಕ್ಕಳಿಗೆ ಭೂಸುಧಾರಣಾ ಕಾಯ್ದಿಯನ್ವಯ ಮಂಜೂರಾದ ಜಮೀನುಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳನ್ನು ನನ್ನ ಅಜ್ಜಿ ದೇವಕಿಯ ವಾರಸುದಾರರಾಗಿ ಯಾವುದೇ ವಾದಿಯು ಯಾವುದೇ ಕಾಲಕ್ಕೂ ದಾವಾ ಆಸ್ತಿಯ ಕಬ್ಜಾ ವಹಿವಾಟಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪುಂಡಲೀಕರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ಪುಂಡಲೀಕರವರ ಏಳು ಜನ ಮಕ್ಕಳಲ್ಲಿ ಒಬ್ಬರಿಗೂ ಮದುವೆಯಾಗಿರಲಿಲ್ಲ ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಕಾರವಾರ.